ಭಾರತ ಸರಕಾರ

ಜವಾಹರ ನವೋದಯ ವಿದ್ಯಾಲಯ, ಆಲಮಟ್ಟಿ ಡ್ಯಾಂ ಸೈಟ್ ಜಿಲ್ಲಾ: ಬಿಜಾಪುರ

ಫೋನ ನಂ: (೦೮೪೨೬) ೨೮೧೦೬೮

ನಂ.: ಜನವಿಬಿ:ಎಫ:೪೨:೨೦೧೬:೨೦೧೭: ದಿನಾಂಕ: ________

ಗೆ,

______________________

______________________

______________________

ವಿಷಯ: ಸಾಮಾನುಗಳನ್ನು ವಿದ್ಯಾಲಯಕ್ಕೆ ಪೂರೈಸುವ ಬಗ್ಗೆ ಟೆಂಡರು.

೧. ಈ ಮೇಲೆ ತಿಳಿಸಿದ ಸಾಮಾನುಗಳನ್ನು ನಾವು ಸೂಚಿಸಿದ ಪಟ್ಟಿಯ (ಅನುಬಂಧದ) ಪ್ರಕಾರ ಪೂರೈಸುವ ಬಗ್ಗೆ ಸೀಲ್ ಮಾಡಿದ ಟೆಂಡರುಗಳನ್ನು ಕರೆಯಲಾಗಿದೆ.

೨. ನೀವು ಸೂಚಿಸಿದ ದರದಲ್ಲಿ ಎಲ್ಲಾ ಬಗೆಯ ತೆರಿಗೆಗಳು ಹಾಗೂ ಸಾಗಾಣಿಕೆ ಖರ್ಚು ಸೇರಿರಬೇಕು.

೩. ಒಮ್ಮೆ ಬರೆದ ದರಗಳನ್ನು ನೀವು ತಿದ್ದುವ ಪ್ರಸಂಗ ಬಂದಲ್ಲಿ ಮೊದಲು ಬರೆದ ದರಗಳನ್ನು ಹೊಡೆದು ಹಾಕಿ ಅದರ ಪಕ್ಕದಲ್ಲಿ ಹೊಸ ದರವನ್ನು ಸ್ಪಷ್ಟವಾಗಿ ಬರೆದು ನಿಮ್ಮ ರುಜು ಹಾಗೂ ತಿದ್ದುಪಡಿ ಮಾಡಿದ ತಾರೀಖು ಹಾಕಬೇಕು.

೪. ಲಗತ್ತೀಕರಿಸಿದ ಫಾರ್ಮಿನಲ್ಲಿ ವಸ್ತುಗಳ ದರಗಳನ್ನು ಸ್ಪಷ್ಟವಾಗಿ ಬರೆದು, ಫಾರಂಗೆ ಸಹಿ ಹಾಗೂ ದಿನಾಂಕ ಹಾಕಿ, ಒಂದು ಕವರಿನಲ್ಲಿಟ್ಟು ಸೀಲು ಮಾಡಬೇಕು. ಈ ಕವರಿನ ಮೇಲ್ಭಾಗದಲ್ಲಿ ದಪ್ಪಕ್ಷರಗಳಲ್ಲಿ ______________ ಸಾಮಗ್ರಿ ಪೂರೈಸುವ ಬಗ್ಗೆ ಟೆಂಡರು ಎಂದು ಸ್ಪಷ್ಟವಾಗಿ ಬರೆದು ಕೆಳಭಾಗದಲ್ಲಿ ಪ್ರಾಚಾರ್ಯರಿಗೆ, ಜವಾಹರ ನವೋದಯ ವಿದ್ಯಾಲಯ, ಆಲಮಟ್ಟಿ ಡ್ಯಾ ಸೈಟ ಜಿಲ್ಲೆ: ಬಿಜಾಪುರ ಎಂದು ವಿಳಾಸ ಬರೆಯಬೇಕು ಕವರಿನ ಹಿಂಭಾಗದಲ್ಲಿ ನಿಮ್ಮ ವಿಳಾಸ ಬರೆಯಬೇಕು.

೫. ಸೀಲು ಮಾಡಿದ ಕವರಿನಲ್ಲಿ ರೂ. _________ ಸ್ಟೇಟ ಬ್ಯಾಂಕ ಆಫ ಇಂಡಿಯಾದ ಡಿಮ್ಯಾಂಡ ಡ್ರಾಫ್ಟನ್ನು ಪ್ರಾಚಾರ್ಯರು, ಜವಾಹರ ನವೋದಯ ವಿದ್ಯಾಲಯ, ಆಲಮಟ್ಟಿ ಡ್ಯಾ ಸೈಟ ಜಿಲ್ಲೆ: ಬಿಜಾಪುರ ಇವರ ಹೆಸರಿನಲ್ಲಿ ತೆಗೆಸಿ ಟೆಂಡರಿನೊಂದಿಗೆ ಲಗತ್ತಿಸಬೇಕು ಇದನ್ನು ಇಎಂಡಿ ಎಂದು ಪರಿಗಣಿಸಲಾಗುವುದು. ಇದು ಇಲ್ಲದ ಟೆಂಡರನ್ನು ತಿರಸ್ಕರಿಸಲಾಗುವದು.

೬. ಟೆಂಡರ ಪಡೆದ ನಂತರ, ಕಂಟ್ರಾಕ್ಟಿನ ಒಪ್ಪಂದದ ವಿವರವಿದ್ದ ಬಾಂಡ ಪೇಪರಿನ ಮೇಲೆ ಸಹಿ ಹಾಕಿ ಅದರೊಂದಿಗೆ ಅಂದಾಜು ಎಷ್ಟು ರೂಪಾಯಿಗಳ ಸಾಮಾನುಗಳನ್ನು ಪೂರೈಸುವಿರೋ, ಅದರ ಶೇಕಡಾ ಹತ್ತರಷ್ಟು ಭದ್ರತಾ ಠೇವಣಿ ಎಂದು ಬ್ಯಾಂಕ ಡಿ. ಡಿ ರೂಪದಲ್ಲಿ ಇರಬೇಕು. ಈ ಮೊತ್ತವನ್ನು ಪೂರೈಕೆ ಮುಗಿದ ಬಳಿಕ ಹಿಂತಿರುಗಿಸಲಾಗುವುದು. ಈ ಮೊತ್ತಕೆ ಯಾವುದೇ ಬಡ್ಡಿ ಕೊಡಲಾಗುವುದಿಲ್ಲ.

೭. ತಿರಸ್ಕೃತವಾದ ಟೆಂಡರುಗಳು ಅವರು ಇಟ್ಟ ಇಎಂಡಿ ಹಣಕ್ಕೆ ಬಡ್ಡಿರಹಿತವಾಗಿ ಹಿಂತಿರಿಗಿಸಲಾಗುವುದು. ಸ್ವೀಕೃತವಾದ ಟೆಂಡರುಗಳು ಯಾವುದಾದರೂ ಕಾರಣ ವೊಡ್ಡಿ ಸಾಮಾನುಗಳನ್ನು ಪೂರೈಸುವ ಕಂಟ್ರಾಕ್ಟಿಗೆ ಒಪ್ಪಿಕೊಳ್ಳದಿದ್ದರೆ ಅವರು ಇಟ್ಟ ಇಎಂಡಿಯನ್ನು ಹಿಂತಿರುಗಿಸಲಾಗುವುದಿಲ್ಲ.

೮. ಇಎಂಡಿ ಮೊತ್ತವನ್ನು ಭದ್ರತಾ ಠೇವಣಿಯೊದಿಗೆ ಹೊಂದಿಸಿಕೊಳ್ಳಲಾಗುವದಿಲ್ಲ. ಅಂದರೆ ಭದ್ರತಾ ಠೇವಣಿಯನ್ನು ಪ್ರತ್ಯೇಕ ನೀಡಬೇಕಾಗುತ್ತದೆ.

೯. ಯಶಸ್ವಿ ಟೆಂಡರುದಾರರು ಪೂರೈಸಿದ ಮಾಲಿನ ಹಣವನ್ನು ಚೆಕ್ ಅಥವಾ ಡಿಡಿ ಮೂಲಕ ಸಂದಾಯ ಮಾಡಲಾಗುವುದು ನಗದು ಹಣ ನೀಡಲಾಗುವುದಿಲ್ಲ.